ಬೈಲಹೊಂಗಲ ತಾಲ್ಲೂಕಿನ ಸಂಗೊಳ್ಳಿ, ದೇವಲಾಪುರ, ಬೈಲವಾಡ ಗ್ರಾಮಗಳಲ್ಲಿ ಕೃತಕ ಗರ್ಭಧಾರಣಾ ಕೇಂದ್ರ ಕುರಿತು

124 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ): ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಳಗಾಂ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ (1) ಸಂಗೊಳ್ಳಿ, 2) ದೇವಲಾಪುರ, 3) ಬೈಲವಾಡ ಗ್ರಾಮಗಳಲ್ಲಿ ಕೃತಕ ಗರ್ಭಧಾರಣ ಕೇಂದ್ರಗಳನ್ನು ಆರ್.ವಿ.ಡಿ. ಯನ್ನಾಗಿ ಪರಿವರ್ತಿಸಲು ಆದೇಶ ನೀಡಿದ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ;*

ಆ) *ಹಾಗಿದ್ದಲ್ಲಿ ಈ ಕೃತಕ ಗರ್ಭಧಾರಣಾ ಕೇಂದ್ರಗಳನ್ನು ಆರ್.ವಿ.ಡಿ.ಯನ್ನಾಗಿ ಪರಿವರ್ತಿಸಲು ಸರ್ಕಾರದವರು ಯಾವ ಕ್ರಮ ಕೈಗೊಂಡಿರುವರು?*

ಶ್ರೀ ಕೆ.ಎನ್. ನಾಗೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಬೆಳಗಾಂ ಜಿಲ್ಲೆ ಸೌದತ್ತಿ ತಾಲ್ಲೂಕಿನ ಮಲ್ಲೂರು ಹಾಗೂ ಸುತ್ತಗಟ್ಟಿ ಗ್ರಾಮಗಳಲ್ಲಿ ಆಯುರ್ವೇದ ದವಾಖಾನೆಗಳನ್ನು ಪ್ರಾರಂಭಿಸುವ ಬಗ್ಗೆ

120 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ): ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಳಗಾಂ ಜಿಲ್ಲೆ ಸೌದತ್ತಿ ತಾಲ್ಲೂಕಿನ ಮಲ್ಲೂರು, ಸುತ್ತಗಟ್ಟಿ ಗ್ರಾಮದಲ್ಲಿ ಆಯುರ್ವೇದ ದವಾಖಾನೆಗಳನ್ನು ಪ್ರಾರಂಭಿಸಲು ಮನವಿಗಳು ಬಂದಿವೆಯೇ?*

ಆ) *ಹಾಗಿದ್ದಲ್ಲಿ ಆಯುರ್ವೇದ ದವಾಖಾನೆಗಳನ್ನು ಆ ಗ್ರಾಮಗಳಲ್ಲಿ ಪ್ರಾರಂಭಿಸಲು ಸರ್ಕಾರದವರು ಯಾವ ಕ್ರಮ ಕೈಗೊಂಡಿರುವರು?*

ಇ) *ಮಂಡಲ ಪಂಚಾಯತಿಯವರು ಹಾಗೂ ಸಾರ್ವಜನಿಕರು ಆ ಎರಡು ಗ್ರಾಮಗಳಲ್ಲಿ ಆಯುರ್ವೇದ ದವಾಖಾನೆಗಳನ್ನು ಪ್ರಾರಂಭಿಸಲು ಕಟ್ಟಡ ಹಾಗೂ ಉಳಿದ ಎಲ್ಲಾ ಸವಲತ್ತುಗಳನ್ನು ಕೊಡಲು ಮುಂದೆ ಬಂದ ಕಾರಣ ಸರ್ಕಾರದವರು ಅಲ್ಲಿ ಆಯುರ್ವೇದ ದವಾಖಾನೆಗಳನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳುವರೇ?*

ಶ್ರೀ ಬಿ.ಎಸ್. ಪಾಟೀಲ್ ಸಾಸನೂರು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಬಂದಿದೆ.

ಆ) ಈ ಗ್ರಾಮಗಳಲ್ಲಿ ಒಂದೊಂದು ಸರ್ಕಾರಿ ಆಯುರ್ವೇದ ಔಷಧಾಲಯ ಮಂಜೂರಾತಿ ನೀಡುವ ಬಗ್ಗೆ ಅಗತ್ಯ ಆಯವ್ಯಯ ಅವಕಾಶದೊಂದಿಗೆ ಸೂಕ್ತ ಪ್ರಸ್ತಾವನೆ ತರಿಸಲು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಿಗೆ ಪತ್ರ ಬರೆದು ಅದರ ಪ್ರತಿಯನ್ನು ಮುಖ್ಯ ಯೋಜನಾಧಿಕಾರಿಗಳು ಜಿಲ್ಲಾ ಪಂಚಾಯತ್ ಬೆಳಗಾಂ ಇವರಿಗೆ ಕಳುಹಿಸಿ ಕೊಡಲಾಗಿದೆ. ಗ್ರಾಮಾಂತರ ಪ್ರದೇಶದಲ್ಲಿ ಔಷಧಾಲಯಗಳನ್ನು ತೆರೆಯುವುದು ಆಯಾ ಜಿಲ್ಲಾ ಪಂಚಾಯತಿ ವ್ಯಾಪ್ತಿಯಲ್ಲಿ ಬರುವುದರಿಂದ ಅವರಿಂದ ಆಯವ್ಯಯ ಒದಗಿಸಿ ಪ್ರಸ್ತಾವನೆ ಬಂದ ನಂತರ ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು.